KATK010000032021



**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು**

**ವಿಶೇಷ ಮೊಕದ್ದಮೆ.2/2021**

ಪ್ರಾ.ಸಾ. ಃ **5**

ದೋ.ಸಾ. ಃ **9**

ದಿ.**26.02.2026.**

| | |
|---|---|
| ಹೆಸರು | ಃ ರುದ್ರೇಶ |
| ತಂದೆಯ ಹೆಸರು | ಃ ಗುರುಚನ್ನಬಸವಯ್ಯ |
| ವಯಸ್ಸು | ಃ **55** ವರ್ಷ |
| ಉದ್ಯೋಗ | ಃ ಕಿರಾಣಿ ಅಂಗಡಿ |
| ವಾಸಸ್ಥಳ | ಃ ರಾಜಾಜಿನಗರ, ಬೆಂಗಳೂರು |

ಸಾಕ್ಷಿಯನ್ನು ಕರೆಸಿ, ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ**

1. ಉರ್ಡಿಗೆರೆ ಗ್ರಾಮದ ಬಸವೇಶ್ವರ ದೇವಸ್ಥಾನದ ಹತ್ತಿರ ಇರುವ ಲಿಂಗಾಯಿತರ ಬೀದಿಯಲ್ಲಿ ನನಗೆ 3 ಮನೆಗಳು ಇವೆ. ಅವುಗಳನ್ನು ಬಾಡಿಗೆಗೆ ಕೊಟ್ಟಿದ್ದೇನೆ. ನನಗೆ ಆರೋಪಿ ಅಮ್ಜದ್ ಖಾನ್ ಗೊತ್ತಿದೆ. ಅಮ್ಜದ್ ಖಾನ್ ನಮ್ಮ ಮನೆಯಲ್ಲಿ ಬಾಡಿಗೆಗೆ ಇದ್ದನು. ಅಮ್ಜದ್ ಖಾನ್ ಮಾದಕ ವಸ್ತುವನ್ನು ಮಾರುತ್ತಾರೆಂದು ಗೊತ್ತಾಯಿತು. ಈ ವಿಷಯವನ್ನು ನಾನು ಪೋಲೀಸರ ಮುಂದೆ ಹೇಳಿದ್ದೇನೆ.

**ಪಾಟೀ ಸವಾಲು ಶ್ರೀ.ಜಿ.ಎಸ್.ರೆಹಮಾನ್, ವಕೀಲರಿಂದ 1 ನೇ ಆರೋಪಿತನ ಪರವಾಗಿಃ**

2. ನಾನು 1 ನೇ ಆರೋಪಿ ಅಮ್ಜದ್ ಖಾನ್ ಗೆ ಕರಾರು ಬರೆದುಕೊಟ್ಟಿಲ್ಲ. ನಾನು ಬೆಂಗಳೂರಿನಲ್ಲಿ ವಾಸವಿದ್ದೇನೆ. 1 ನೇ ಆರೋಪಿಯನ್ನು ಈ ದಿನ ನೋಡುತ್ತಿದ್ದೇನೆ, ಈ ಹಿಂದೆ ನೋಡಿಲ್ಲ. ನನಗೆ ಈ ವಿಚಾರವನ್ನು ಬೇರೆಯವರು ಹೇಳಿದ್ದಾರೆ. ನನಗೆ ಖುದ್ದಾಗಿ ಗೊತ್ತಿಲ್ಲ. ನಾನು ಅಮ್ಜದ್ ಖಾನ್ ಗೆ ಬಾಡಿಗೆಗೆ ಕೊಟ್ಟಿಲ್ಲ, ಅವರ ಮಾವ ಕರೀಂ ಗೆ ಬಾಡಿಗೆಗೆ ಕೊಟ್ಟಿದ್ದೇನೆ. ಕರಾರು ಪತ್ರ ಬರೆದುಕೊಟ್ಟಿಲ್ಲ.

**ಪಾಟೀ ಸವಾಲು ಶ್ರೀ.ಹೆಚ್.ವಿ.ರಂಗನಾಥ ರೆಡ್ಡಿ, ವಕೀಲರಿಂದ 2 ನೇ ಆರೋಪಿತನ ಪರವಾಗಿಃ**

ಪಾಟೀ ಸವಾಲು ಇಲ್ಲ ಎಂದು ವಕೀಲರು ಹೇಳಿರುತ್ತಾರೆ.

ಮರು ವಿಚಾರಣೆ ಃ ಇಲ್ಲ

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು